**ದಿಃ02-12-2022 ರಂದು ಸಾಕ್ಷಿಧಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಎದುರುದಾರರ ಪರ ಶ್ರೀ.ಎಂ.ಜಿ.ಪಿ ವಕೀಲರಿಂದಃ**

ನನ್ನ ಸಾಕ್ಷ್ಯ ಪ್ರಮಾಣ ಪತ್ರ ಬರೆಯಲು ನಮ್ಮ ವಕೀಲರಿಗೆ ನನ್ನ ಅಳಿಯ ಮಾಹಿತಿ ನೀಡಿದನು. ನನ್ನ ಅಳಿಯನ ಹೆಸರು ಶಿವನಾಗಪ್ಪ. ನನ್ನ ಸಾಕ್ಷ್ಯಪ್ರಮಾಣ ಪತ್ರದಲ್ಲಿ ಬರೆದಿರುವ

ವಿಚಾರ ನನಗೆ ಗೊತ್ತು. ನನ್ನ ಅಳಿಯ ಶಾಲೆ ಕಲಿತಿರುತ್ತಾರೆ. ನನ್ನ ಅಳಿಯ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಹೇಳಲಾದ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎದಂರೆ ಸರಿಯಲ್ಲ ಹಾನಗಲ್ಲನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಅಸಲು ದಾವೆ ಸಂಖ್ಯೆ 342/2015 ರಂತೆ ಪ್ರಕರಣ ದಾಖಲಾಗಿತ್ತು ಎನ್ನುವುದು ಸರಿ. ಈ ದಾವೆ ಯಾವ ದಿನಾಂಕದಂದು ಆದೇಶವಾಗಿದೆ ಎನ್ನುವುದು ನನಗೆ ಗೊತ್ತು. ಆದರೆ ಯಾವ ದಿನಾಂಕ, ತಿಂಗಳು ಮತ್ತು ಇಸ್ವಿಯಂದು ಆದೇಶವಾಗಿರುವ ವಿಚಾರ ನಾನು ಶಾಲೆ ಕಲಿತಿಲ್ಲವಾದ ಕಾರಣ ಗೊತ್ತಿಲ್ಲ. ಆ ದಾವೆಯು ದಿಃ12-11-2021 ರಂದು ವಜಾ ಆಗಿದೆ ಎಂದು ಆದೇಶವಾಗಿರುತ್ತದೆ. ನನಗೆ ಸುಮಾರು 75 ವರ್ಷ ವಯಸ್ಸಾಗಿದೆ. ನನಗೆ ಈಗ ಯಾವುದೇ ಕೆಲಸ ಮಾಡಲು ಆಗುವುದಿಲ್ಲ. ನಾನು ನವೇಂಬರ್ ಮತ್ತು ಡಿಸೆಂಬರ್ 2021 ರ ತಿಂಗಳಿನಲ್ಲಿ ದುಡಿಯಲು ಬೇರೆ ಕಡೆ ಹೋಗಿದ್ದೇನೆ ಎಂದು ಸುಳ್ಳು ಬರೆಸಿದ್ದೇನೆ ಎಂದರೆ ಸರಿಯಲ್ಲ. ನಾನು ಶಂಕ್ರಿಕೊಪ್ಪ ಗ್ರಾಮದಲ್ಲಿ ಕಳೆದ 2-3 ವರ್ಷಗಳಿಂದ ವಾಸವಾಗಿದ್ದೇನೆ. ಕಳೆದ 2-3 ವರ್ಷಗಳಿಂದ ನನ್ನ ಅಳಿಯ ದುಡಿಯಲು ಬೇರೆ ಕಡೆಗೆ ಕರೆದುಕೊಂಡು ಹೋಗಿದ್ದನು. ನನಗೆ ಸುಮಾರು 75 ವರ್ಷಗಳಾಗಿರುವುದರಿಂದ ದುಡಿಯುವ ಶಕ್ತಿ ಇಲ್ಲ ಎಂದರೆ ಸರಿಯಲ್ಲ. ನಾನು ಎಂದೂ ಸಹ ನನ್ನ ಅಳಿಯನ ಜೊತೆ ದುಡಿಯಲು ಎಲ್ಲಿಗೂ ಸಹ ಹೋಗಿರಲಿಲ್ಲ, ಓ.ಎಸ್ ನಂಬರ 342/2015 ರ ಪ್ರಕರಣ ವಜಾ ಆಗಿರುವ ವಿಚಾರ ಗೊತ್ತಿದ್ದರೂ ಸಹ ನನಗೆ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈ ಮೇಲ್ಮನವಿಯನ್ನು ಉದ್ದೇಶಪೂರ್ವಕವಾಗಿಯೇ 48 ದಿನ ತಡವಾಗಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಈ ವಿಚಾರ ಗೊತ್ತಿದ್ದರೂ ಸಹ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

ಸಾಕ್ಷಿದಾರರ ಸಹಿ

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್